ಅ) 103 ಗುಡಿಸಲುಗಳಲ್ಲಿ 99 ಗುಡಿಸಿಲುಗಳು ಬೆಂಕಿ ಅಪಘಾತದಿಂದ ಮತ್ತು 4 ಗುಡಿಸಿಲುಗಳು ಕಚೋದ್ಯತನದಿಂದ ಸುಟ್ಟಿರುತ್ತವೆ, ಅವು ಈ ರೀತಿ ಇರುತ್ತವೆ. ಜಡಮುಂಟಿ ಗ್ರಾಮ ಚಳ್ಳಕೆರೆ ತಾಲ್ಲೂಕು ದಿನಾಂಕ 23-7-91.

ಹುಲಿಕುಂಟಿ ಗ್ರಾಮ ಚಳ್ಳಕೆರೆ ತಾಲ್ಲೂಕು ದಿನಾಂಕ : 28-8-91.

ಬೆಟ್ಟದನಾಗೇನಹಳ್ಳಿ ಚಿತ್ರದುರ್ಗ ತಾಲ್ಲೂಕು ದಿನಾಂಕ : 22-4-91.

ಮಾಯಸಂದ್ರ ಗ್ರಾಮ ಹಿರಿಯೂರು ತಾಲ್ಲೂಕು ದಿನಾಂಕ : 9-5-91.

ಈ ಬಗ್ಗೆ ಚಳ್ಳಕೆರೆ ಅಪರಾಧ್ಯ ಸಂಖ್ಯೆ. 164:91ರ ಪ್ರಕರಣದಲ್ಲಿ 4 ಜನ ಆರೋಪಿತರನ್ನು ಗುರುತಿಸಲಾಗಿದೆ.

ಇ) 1) ಚಳ್ಳಕೆರೆ ಪೋಲೀಸ್ ಠಾಣೆಯ ಅಪರಾಧ ಸಂಖ್ಯೆ. 164.91 ರಲ್ಲಿ 4 ಜನ ಅಪರಾಧಿಗಳಾದ.

1) ನಿಂಗಪ್ಪ 40 ವರ್ಷ 2) ಬೂತಪ್ಪ 35 ವರ್ಷ 3) ತಿಮ್ಮಪ್ಪ 25 ವರ್ಷ 4) ಈರಪ್ಪ 26 ವರ್ಷ ಇವರುಗಳ ಮೇಲೆ ಕ್ರಮ ಕೈಕೊಳ್ಳಲಾಗುತ್ತಿದೆ.

2) ಚಳ್ಳಕೆರೆ ಪೋಲೀಸ್ ಠಾಣೆಯ ಅಪರಾಧ ಸಂಖ್ಯೆ. 192:91 ರಲ್ಲಿ 3 ಜನ ಅಪರಾಧಿಗಳ ಮೇಲೆ ಸಂಶಯಪಡಲಾಗಿದ್ದು ದಸ್ತಗಿರಿ ಮಾಡಿರುವುದಿಲ್ಲ.

3) ಚಿತ್ರದುರ್ಗ ಪೋಲೀಸ್ ಠಾಣೆಯ ಅಪರಾಧ ಸಂಖ್ಯೆ. 120:91 ರಲ್ಲಿ ಆರೋಪಿತರನ್ನು ಗುರ್ತಿಸಲಾಗಿರುವುದಿಲ್ಲ.

4) ಹಿರಿಯೂರು ಪೋಲೀಸ್ ಠಾಣೆಯ ಅಪರಾಧ ಸಂಖ್ಯೆ 160:91 ರಲ್ಲಿ 4 ಜನ ಅಪರಾಧಿ ಗಳಾದ 1) ಓಂಕಾರಪ್ಪ 2) ಪುಟ್ಟರಂಗಣ್ಣ 3) ರತ್ನಮ್ಮ 4) ಬೊರಜ್ಜಿ.

ಈ) ಕಲಂ 436 ಭಾ.ದಂ. ಸಂ.ರ ಪ್ರಕಾರ ಈ ಮೇಲ್ಕಂಡ ಅಪರಾಧಿಗಳ ಮೇಲೆ ಕ್ರಮ ಕೈಕೊಳ್ಳಲಾಗುತ್ತಿದೆ. ಈ ಸದರಿ ಪ್ರಕರಣಗಳು ತನಿಖೆಯಲ್ಲಿದ್ದು, ತನಿಖೆ ನಂತರ ದೋಷಾರೋಪಣೆಯನ್ನು ಸಲ್ಲಿಸಲಾಗುವುದು.

ಕರ್ನಾಟಕ ಗೃಹ ಮಂಡಲಿಯ ಬಗ್ಗೆ.

3202 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಗೃಹ ಮಂಡಳಿಯ ಆಶ್ರಯದಲ್ಲಿ ಕೈಗೊಳ್ಳಲಾಗಿರುವ ಕೆಂಗೇರಿ ಗೃಹ ನಿರ್ಮಾಣ ಯೋಜನೆಯ ಕಾಮಗಾರಿಯನ್ನು ಯಾರಿಗೆ ವಹಿಸಿಕೊಡಲಾಗಿದೆ?

ಆ) ಈ ಯೋಜನೆಯಡಿಯಲ್ಲಿನ ಗೃಹ ನಿರ್ಮಾಣಕ್ಕೆ ಬಂದಿದ್ದ ಟೆಂಡರುಗಳೆಷ್ಟು? ಎಲ್ಲಾ ಟೆಂಡರುಗಳನ್ನು ಏಕಕಾಲದಲ್ಲಿ ಬಹಿರಂಗ ಪಡಿಸಿದೆಯೇ?

ಇ) ಈ ಕಾಮಗಾರಿಯನ್ನು ವಹಿಸಿರುವ ಬೇರೆ ರಾಜ್ಯದ ಸಂಸ್ಥೆಗೆ ಮುಂಗಡವಾಗಿ ಕೊಟ್ಟಿರುವ ಹಣವೆಷ್ಟು? ಇದಕ್ಕೆ ಮಂಡಳಿಯವರು ವಿಧಿಸಿರುವ ಬಡ್ಡಿಯೆಷ್ಟು?

ಈ) ಬೃಹತ್ ಪ್ರಮಾಣದ ಮುಂಗಡವನ್ನು ಕೊಡುವ ಮುನ್ನ ಗೃಹ ಮಂಡಳಿಯು ಸದರಿ ಸಂಸ್ಥೆ ನಿರ್ಮಾಣ ಯೋಜನೆಗಾಗಿ ಕ್ರೂಡೀಕರಿಸುವ ನಿರ್ಮಾಣ ಸಾಮಗ್ರಿಗಳನ್ನು ಪರಿಶೀಲಿಸಲಾಗಿತ್ತೆ?

ಉ) ಕೆಂಗೇರಿ ಗೃಹ ನಿರ್ಮಾಣ ಯೋಜನೆಗೆ ಸಾರ್ವಜನಿಕರಿಂದ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :

ಅ) ಮೆಸರ್ಸ್ ಬಿ.ಜಿ. ಶಿರ್ಕೆ ಮತ್ತು ಕಂಪೆನಿ, ಪುಣೆ.

ಆ) 1) ಐದು.

2) ಮೊದಲ ಸಲ ಒಂದು ಮತ್ತು ಎರಡನೆ ಸಲ ನಾಲ್ಕು ಟೆಂಡರುಗಳನ್ನು ಬಹಿರಂಗಪಡಿಸಿದೆ.

ಇ) 1) ರೂ. 5,58,00000

2) ಒಪ್ಪಂದದ ಪ್ರಕಾರ ಬಡ್ಡಿಯಿಲ್ಲ.

ಈ) ಟೆಂಡರ್ ನಿಬಂಧನೆಗಳ ಪ್ರಕಾರ ಒಟ್ಟು ಹಣದ (ರೂ. 34,92,16,145-00) ಶೇಕಡ 10 ರಷ್ಟನ್ನು ಸಿದ್ಧತೆ ಹಣವನ್ನಾಗಿಯೂ (Mobilization Advance) ಮತ್ತು ಶೇಕಡ 6 ರಷ್ಟನ್ನು ಯಂತ್ರ ಸಲಕರಣೆ (plants/ Machinery) ಗಳಿಗೋಸ್ಕರ ಕೊಟ್ಟಿದೆ.

ಉ) 3577

ಬಂಟ್ವಾಳ ಪುರಸಭೆಯ ವ್ಯಾಪ್ತಿಯಲ್ಲಿ ಸಮಗ್ರ ನಲ್ಲಿ ನೀರಿನ ಯೋಜನೆ ಬಗ್ಗೆ.

3208 - ಶ್ರೀ ಬಿ. ರಮಾನಾಥರೈ (ಬಂಟ್ವಾಳ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಂಟ್ವಾಳ ಪುರಸಭೆಯ ವ್ಯಾಪ್ತಿಯಲ್ಲಿ ಸಮಗ್ರ ನಲ್ಲಿ ನೀರಿನ ಯೋಜನೆಯನ್ನು ಎಂದು ಕೈಗೆತ್ತಿಕೊಳ್ಳಲಾಗುವುದು.

ಆ) 1991-92ನೇ ಸಾಲಿನ ಆರ್ಥಿಕ ವರ್ಷದಲ್ಲಿ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲು ಹಣಕಾಸು ಇಲಾಖೆಗೆ ಒಪ್ಪಿಗೆ ನೀಡುವುದೇ ಈ ಬಗ್ಗೆ ಈಗಾಗಲೇ ನೀಡಲಾಗಿದ್ದು ಭರವಸೆ ಯಾವ ಹಂತದಲ್ಲಿದೆ?

ಇ) ಈ ಯೋಜನೆಯನ್ನು ಆದಷ್ಟು ಬೇಗನೆ ಕೈಗೆತ್ತಿಕೊಳ್ಳಲು ಸರ್ಕಾರ ಏನಾದರೂ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :

ಅ) ಸರ್ಕಾರದ ಆಡಳಿತಾತ್ಮಕ ಅನುಮೋದನೆಯ ನಂತರ, ಬಂಟ್ವಾಳ ಪಟ್ಟಣದ ನೀರು ಸರಬರಾಜಿನ ರೂ. 99.95 ಲಕ್ಷಗಳ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗುವುದು.

ಆ) ಈ ಯೋಜನೆಯನ್ನು 1991-92ರ ಸಾಲಿನಲ್ಲಿ ಪ್ರಸ್ತಾಪಿಸಲಾಗಿದೆ.

ಇ) ಪ್ರಸ್ತಾವನೆ ಬಂದ ಕೂಡಲೇ ಕ್ರಮ ತೆಗೆದುಕೊಳ್ಳಲಾಗುವುದು.

ಎ ಮತ್ತು ಬಿ ಅಧಿಕಾರಿಗಳ ಬಗ್ಗೆ

3104 - ಶ್ರೀ ಗೋಪಿನಾಥ ಆರ್. ಸಾಂಡ್ರ(ಹುಬ್ಬಳ್ಳಿ-ಗ್ರಾಮಾಂತರ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಒಂದನೇ ಮತ್ತು ಎರಡನೇ ದರ್ಜೆಗಳ ಅಧಿಕಾರಿಗಳಲ್ಲಿ ಹಿಂದುಳಿದವರು ಮತ್ತು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದವರ ಸಂಖ್ಯೆ ಎಷ್ಟು? ಜಾತಿವಾರು ವಿವರ ತಿಳಿಸುವುದು, ಅವರಲ್ಲಿ ಉತ್ತರ ಕರ್ನಾಟಕದವರು ಎಷ್ಟು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಯವರು):

ಅ) ರಾಜ್ಯದಲ್ಲಿ, ದಿನಾಂಕ 31-3-1990 ರ ವೇಳೆಗೆ 11,713 'ಎ' ವೃಂದದ ಅಧಿಕಾರಿಗಳು ಮತ್ತು 20,008 'ಬಿ' ವೃಂದದ ಅಧಿಕಾರಿಗಳು ಇದ್ದರು. ಇವರಲ್ಲಿ